ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಟಿ.ಸಿ. ಗಳು ಕಂಬಗಳು ಲೈನ್‌ಮನ್‌ಗಳ ಕೊರತೆ

719 (18) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ತೀರ್ಥಹಳ್ಳಿ, ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ಟಿ.ಸಿ.ಗಳ, ಕಂಬಗಳ ಮತ್ತು ಲೈನ್‌ಮನ್‌ಗಳ ಕೊರತೆಯಿಂದಾಗಿ ತೀರ್ಥಹಳ್ಳಿ ಕ್ಷೇತ್ರ ವಿದ್ಯುಚ್ಛಕ್ತಿ ಸಮಸ್ಯೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮೇಲ್ಕಂಡ ಸಮಸ್ಯೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಮತ್ತು ಆ) ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ವ್ಯಾಪ್ತಿಯ ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರವು ಶಿವಮೊಗ್ಗ ವಿಭಾಗ ವ್ಯಾಪ್ತಿಯಲ್ಲಿದ್ದು ಶಿವಮೊಗ್ಗ ವಿಭಾಗೀಯ ಉಗ್ರಾಣದಲ್ಲಿ ದಿನಾಂಕ:30–06–2012ರ ಅಂತ್ಯಕ್ಕೆ 54 ಸಂಖ್ಯೆಯ ಟಿ.ಸಿ.ಗಳು ಹಾಗೂ 850 ಸಂಖ್ಯೆಯ ಕಂಬಗಳು ದಾಸ್ತಾನು ಇರುತ್ತವೆ. ಮುಂದವರೆದು, ಶಿವಮೊಗ್ಗ ವೃತ್ತ ವ್ಯಾಪ್ತಿಗೆ 13,475 ಸಂಖ್ಯೆಯ ಕಂಬಗಳಿಗೆ ಖರೀದಿ ಆದೇಶ ನೀಡಲಾಗಿದೆ ಹಾಗೂ ಕರ್ನಾಟಕ ವಿದ್ಯುತ್ ಕಾರ್ಖಾನೆಯಿಂದ ಸುಮಾರು 3,100 ಸಂಖ್ಯೆಯ ಟಿ.ಸಿ.ಗಳು ಪೈಪ್‌ಲೈನ್‌ನಲ್ಲಿದ್ದು, ಸರಬರಾಜಾಗಬೇಕಾಗಿವೆ. ಆದ್ದರಿಂದ, ಟಿ.ಸಿಗಳ ಮತ್ತು ಕಂಬಗಳ ಕೊರತೆ ಇರುವುದಿಲ್ಲ.

ಲೈನ್‌ಮೆನ್‌ಗಳ ಕೆಲವು ಹುದ್ದೆಗಳು ಖಾಲಿ ಇದ್ದು, ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಬೀದರ್ ಸರ್ಕಾರಿ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ಅವ್ಯವಹಾರಗಳು

708 (215) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೀದರ್ ಸರ್ಕಾರಿ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ಸಿಬ್ಬಂದಿ ನೇಮಕಾತಿ ಉಪಕರಣಗಳ ಖರೀದಿ ಹಾಗೂ ಇನ್ನೂ ಅನೇಕ ವಸ್ತುಗಳ

ಖರೀದಿಯಲ್ಲಿ ಉನ್ನತ ಸ್ಥಾನದ ಅಧಿಕಾರಿಗಳು ಬಾರಿ ಪ್ರಮಾಣದಲ್ಲಿ ಅಕ್ರಮ ಹಾಗೂ ಅವ್ಯವಹಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಕ್ಕೆ ಈ ರೀತಿ ಅವ್ಯವಹಾರ ನಡೆಸಿದವರ ಉನ್ನತ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಇದುವರೆವಿಗೂ ಯಾವುದೇ ಶಿಸ್ತು ಕ್ರಮ ಜರುಗಿಸದಿದ್ದರೆ ಇನ್ನು ಮುಂದೆಯಾದರೂ ಇವರುಗಳ ಮೇಲೆ ಕ್ರಮ ಜರುಗಿಸುವುದೇ?

ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚಿಕ್ಕಬಳ್ಳಾಪುರ ಜಿಲ್ಲೆಗೆ ವೈದ್ಯಕೀಯ ಕಾಲೇಜು

748 (204) ಶ್ರೀ ಸಂಪಂಗಿ. ಎನ್. (ಬಾಗೇಪಲ್ಲಿ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಪ್ರಾರಂಭ ಮಾಡದಿರಲು ಕಾಣವೇನು; ಯಾವಾಗ ಪ್ರಾರಂಭ ಮಾಡಲಾಗುವುದು (ಸಂಪೂರ್ಣ ವಿವರ ನೀಡುವುದು);

ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭ ಮಾಡುವ ಪ್ರಸ್ತಾವನೆಯನ್ನು ಸ್ವೀಕರಿಸಿದ್ದು, ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿಗಳ ಪ್ರಕಾರ ಮೂಲಭೂತ ಸೌಕರ್ಯಗಳು ಇರುವ ಬಗ್ಗೆ ವರದಿ ಸಲ್ಲಿಸಲು ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿಕ್ಕಬಳ್ಳಾಪುರ ಇವರಿಗೆ ಪತ್ರ ಬರೆದಿದ್ದು, ವರದಿಯ ನಿರೀಕ್ಷೆಯಲ್ಲಿದೆ. ವರದಿ ಪಡೆದ ನಂತರ ಪರಿಶೀಲಿಸಲಾಗುವುದು.